ಗೊತ್ತಾಗಲಿಲ್ಲ. ಮಗಳು ಹೊಸಮನೆಗೆ ಶಿಫ್ಟ್ ಆಗಿದ್ದಳು. ಹೊಸಮನೆ ಸುತ್ತಮುತ್ತಲಿನ ಪರಿಸರ ವರ್ಣಿಸುವುದರಲ್ಲಿಯೇ ಮಗಳು ದಣಿದಿದ್ದಳು. ಮನೆಯ ಸಮೀಪ ಬರುತ್ತಿದ್ದಂತೆ ಸಂಜೆಯಾಗಿತ್ತು. ವಾಹನ ಗೇಟ್ ತಲುಪುತ್ತಿದ್ದಂತೆ ಮೊಮ್ಮಗಳು ಸುಷಮಾಳ ಕಣ್ಣುಗಳನ್ನು ತನ್ನ ಕೈಯಿಂದ ಮುಚ್ಚಿ ಹಿಡಿದಳು. ಕಾರ್ ಮನೆಯ ಬಾಗಿಲು ತಲುಪಿದಾಕ್ಷಣ ಕೈಸರಿಸಿ ಅವಳು 'ಸರ್‌ಪ್ರೈಸ್', 'ಸರ್‌ಪ್ರೈಸ್' ಎಂದು ಕೂಗಿದಳು. ಕತ್ತಲು ಆವರಿಸಿತ್ತು. ಸುತ್ತಲಿನ ಮನೆಗಳಲ್ಲಿ ದೀಪಗಳು ಬೆಳಗುತ್ತಿದ್ದವು. ಸುಷಮಾ ಸರ್‌ಪ್ರೈಸ್ ಹುಡುಕಲು ಸುತ್ತಲೂ ಕಣ್ಣಾಡಿಸಿದಳು.

ಇಲ್ಲಿ ಒಂದು ಮಾತು ಸ್ಪಷ್ಟಪಡಿಸುವ ಅಗತ್ಯವಿದೆ. ಇದೇ ಬೆಂಗಳೂರಿನಲ್ಲಿ ಸುಷಮಾಳ ಬಾಲ್ಯದ ಕೆಲವು ಸುವರ್ಣ ವರ್ಷಗಳು ಕಳೆದಿದ್ದವು. ಅವಳ ತಂದೆ ಆದಾಯ ಕರ ವಿಭಾಗದಲ್ಲಿ ಉನ್ನತ ಸ್ಥಾನದಲ್ಲಿದ್ದರು. ಅವರೊಂದಿಗೆ ದೇಶದ ಅನೇಕ ಕಡೆಗಳಲ್ಲಿ ಸುತ್ತಾಡುವ ಭಾಗ್ಯ ಅವಳಿಗೆ ಸಿಕ್ಕಿತ್ತು. ಆದರೆ ತಂದೆಯೊಂದಿಗೆ ಬೆಂಗಳೂರಿನಲ್ಲಿ ಹೆಚ್ಚು ದಿನ ಕಳೆಯುವ ಅವಕಾಶ ದೊರಕಿತ್ತು. ಸುಷಮಾಳಿಗೆ ಬೆಂಗಳೂರಿನ ಮೂಲೆ ಮೂಲೆಯೂ ಗೊತ್ತಿರುವ ವಿಚಾರ, ಬೆಂಗಳೂರಿನ ಬಗ್ಗೆ ಅವಳು ಆತ್ಮೀಯತೆ–ಪ್ರೀತಿ–ಮಮಕಾರ ಇಟ್ಟುಕೊಂಡಿದ್ದಾಳೆಂಬುದು ಮೊಮ್ಮಗಳು ಸುದತ್ತಾಳಿಗೆ ಚೆನ್ನಾಗಿ ಗೊತ್ತಿತ್ತು. ದೀರ್ಘ ಪ್ರವಾಸದಿಂದ ದಣಿದ ಸುಷಮಾಳ ಮನಸ್ಸಿಗೆ ಮೊಮ್ಮಗಳ 'ಸರ್‌ಪ್ರೈಸ್' ತಕ್ಷಣ ಅರ್ಥವಾಗಲಿಲ್ಲ. ಅವಳು ಅತ್ತಿತ್ತ ಕಣ್ಣಾಡಿಸುತ್ತ ನಿಂತಿದ್ದಳು.

'ಓ ಹೋ... ನೀವಂತೂ ಪೂರ್ತಿ ಒಂದು 'ಸ್ವಾಯಲ್ ಸ್ಪೋರ್ಟಿ' ನಿಮಗೆ ಅಷ್ಟೂ ಗೊತ್ತಾಗಲಿಲ್ವೆ? ನೀವು ನಿಮ್ಮ ಬಾಲ್ಯ ಇದೇ ಪರಿಸರದಲ್ಲಿ ಕಳೆದದ್ದು. ಇಲ್ಲೇ ನೀವಿರ್‍ತಿದ್ದೀರಿ' ಸುದತ್ತಾ ಹರ್ಷೋತ್ಸಾಹದಿಂದ ಹೇಳಿದಳು.

'ಏನಮ್ಮ ನೀ ಹೇಳ್ತಾ ಇರೋದು? ನಮ್ಮ ಕ್ವಾರ್ಟರ್ಸ್ ನಗರದ ಒಂದು ಅಂಚಿನಲ್ಲಿ ಕಾಡುಪ್ರದೇಶದಲ್ಲಿತ್ತು. ಹಾಂ... ಹೌದು ಅಲ್ಲಲ್ಲಿ ಬಂಗ್ಲೆಯಂತಹ ಕಟ್ಟಡಗಳಿದ್ದವು. ನಮ್ಮ ಬಂಗ್ಲೆ ಒಂದೂವರೆ ಎಕರೆ ಉದ್ಯಾನದಲ್ಲಿತ್ತು. ಈ ಸ್ಥಳ ನನಗೆ ಕಲ್ಕತ್ತೆಯ ಚೌರಂಗಿಯಂತೆ ಕಾಣ್ತಾ ಇದೆ. ನಾಲ್ಕೂ ಕಡೆ ಮನೆ ಅಂಗಡಿಗಳೂ ಇವೆ. ದಾರಿಯಲ್ಲಿ ದೊಡ್ಡ ಶಾಪಿಂಗ್ ಮಾಲ್ ನೋಡಿದೆ. ನಮಗೆ ಅಂದು ಕಮರ್ಶಿಯಲ್ ಸ್ಟ್ರೀಟ್ ಅಥವಾ ಎಂ.ಜಿ. ರೋಡಿಗೆ ಹೋಗಬೇಕಾದರೆ ಇಪ್ಪತ್ತು ಇಪ್ಪತ್ತೈದು ಮೈಲು ಜನ ಓಡಾಟವಿಲ್ಲದ ರಸ್ತೆಯಲ್ಲಿ ಹೋಗಿ ಬರಬೇಕಾಗುತಿತ್ತು. ಓ ದೇವರೇ, ಪೆನ್‌ಶನರ್ಸ್ ಪ್ಯಾರಾಡೈಸ್, ಗಾರ್ಡನ್ ಸಿಟಿ, ನನ್ನ ಕನಸಿನ ಬೆಂಗಳೂರು ಸಿಟಿ ಎಲ್ಲಿ ಮಾಯವಾಯಿತು?'

ನನ್ನ ಮಗಳು ಸ್ಮಿತಾ ತಮಾಷೆ ಮಾಡುತ್ತ, 'ಅಮ್ಮಾ ಈ ನಗರಕ್ಕೆ ಇನ್ನು ನೀನು ಬ್ಯಾಂಗಲೋರ್ ಅನ್ನಬೇಡ, ನೆನಪಿಡು ಇದನ್ನು ಇತ್ತೀಚೆಗೆ ಬೆಂಗಳೂರು ಎಂದು ಹೆಸರು ಬದಲಾಯಿಸಿದ್ದಾರೆ. ಬ್ಯಾಂಗಲೋರ್ ಅಂದ್ರೆ ನಿನಗೆ ಕನ್ನಡಿಗರು ತಿಥಿ ಮಾಡಿ ಬಿಟ್ತಾರು. ನಿನ್ಗೆ ಈ ವಿಷಯ ಗೊತ್ತಿರಲಿಕ್ಕಿಲ್ಲ'.

ಸುಷಮಾ ನಿಟ್ಟುಸಿರು ಬಿಡುತ್ತ ಹೇಳಿದಳು, 'ಕೇವಲ ಹೆಸರಿನಲ್ಲಿ ಬದಲಾವಣೆಯಾದರೆ ಪರವಾಗಿಲ್ಲ. ಪರಿಸರ, ಪರಿಸ್ಥಿತಿ, ಮನೋವೃತ್ತಿಯಲ್ಲಿ ಯಾವ ಬದಲಾವಣೆಯಾಗಿಲ್ಲ ಹೇಳು? ಇಪ್ಪತ್ತೈದು ವರ್ಷಗಳ ಹಿಂದೆ ನಿನಗೆ ಸ್ಕೂಲಿಗೆ ಬಿಡಲು ಬಂದಾಗ ಈ ಊರು ಎಷ್ಟು ಸುಂದರವಾಗಿತ್ತು. ಸುತ್ತ ಮುತ್ತ ಹಸಿರು ಹಾಸಿತ್ತು. ತರ ತರಹ ಗಿಡಗಳ ಮೇಲೆ ಕೆಂಪು, ನೀಲಿ, ಹಳದಿ, ಬದನೆಕಾಯಿ ಬಣ್ಣದ ಹೂವುಗಳಿರುತ್ತಿದ್ದವು. ಅವೆಷ್ಟು ಆಕರ್ಷಕವಾಗಿರುತ್ತಿದ್ದವು. ಪಾರ್ಕಿನ ಬೆಂಚಿನ ಮೇಲೆ ಕುಳಿತ ಮಕ್ಕಳು, ಹುಡುಗ – ಹುಡುಗಿಯರು, ಮುದುಕ – ಮುದುಕಿಯರು ಎಷ್ಟು ಆತ್ಮೀಯತೆಯಿಂದ ಭೇಟಿಯಾಗುತ್ತಿದ್ದರು. ಆಗ ಇದೊಂದು ನಗರವಷ್ಟೇ ಅಲ್ಲ ಒಬ್ಬ ನುರಿತ ಕಲಾವಿದ ಕಡುಬಣ್ಣದಿಂದ ಚಿತ್ರಿಸಿದ ಮೋಹಕ ಚಿತ್ರದಂತೆ ಭಾಸವಾಗುತ್ತಿತ್ತು'.

